# ಎನ್ಐಟಿಕೆ ಎಲ್ಎಚ್ಸಿ ಕಾಂಪ್ಲೆಕ್ಸ್‌ನಲ್ಲಿ ಮತಎಣಿಕೆ ಕೇಂದ್ರ

## ಎಣಿಕೆ ಕೇಂದ್ರಕ್ಕೆ ಬಿಗಿ ಭದ್ರತೆ | ಕಟ್ಟಡಕ್ಕೆ ಸಿಸಿ ಕ್ಯಾಮೆರಾ ಕಣ್ಗಾವಲು

**ಲೋಕೇಶ್** ಸುರತ್ಕಲ್
lokeshsurthakal@gmail.com

ಕರ್ನಾಟಕ ವಿಧಾನಸಭೆ ಚುನಾವಣೆಗೆ ಎಲ್ಲ ಸಿದ್ಧತೆ ಪೂರ್ಣಗೊಂಡಿದ್ದು ಇದರ ಜತೆಗೆ ಎನ್ಐಟಿಕೆಯ ಎಲ್ಎಚ್ಸಿ ಕಾಂಪ್ಲೆಕ್ಸ್ ಎ ಕಟ್ಟಡ (ಹಿಂದಿನ ಎಟಿಬಿ) ದಲ್ಲಿ ಮತ ಎಣಿಕೆ ಕೇಂದ್ರ, ಮತಪಟ್ಟಿಗೆಗಳ ಭದ್ರತಾ ಕೇಂದ್ರ ಆರಂಭಕ್ಕೂ ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ.

ಸಿದ್ಧತಾ ಕಾರ್ಯ ಕೆಲವು ದಿನ ಹಿಂದೆಯೇ ಆರಂಭವಾಗಿದ್ದು ಮೇ 10 ಸಂಜೆ ವೇಳೆಗೆ ಪೂರ್ಣವಾಗಲಿದೆ. ಈ ಕಟ್ಟಡ ಎನ್ಐಟಿಕೆ ಆವರಣದೊಳಗೆ ಸ್ಟೇಟ್ ಬ್ಯಾಂಕ್, ಲೈಬ್ರೆರಿ ಕಟ್ಟಡ ಬಳಿಯೇ ಇದೆ. ನಾಲ್ಕೂ ಸುತ್ತಲೂ ಆವರಣಗೋಡೆ ಹೊಂದಿದೆ. ಕೇಂದ್ರಕ್ಕೆ ಇನ್ನೂ ಹಲವು ಸುತ್ತಿನ ಭದ್ರತೆ ತಡೆ



ನಿರ್ಮಿಸಲಾಗಿದೆ.

ಕೇಂದ್ರದ ಬಳಿ ಅನಪೇಕ್ಷಿತ ವ್ಯಕ್ತಿಗಳು ಸಂಚರಿಸದಂತೆ ಸುಮಾರು ನೂರು ಮೀಟರ್ ದೂರದಿಂದಲೇ ತಡೆ ನಿರ್ಮಿಸಲಾಗುತ್ತಿದೆ. ಇಡೀ ಕಟ್ಟಡಕ್ಕೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದ್ದು ಮಂಗಳವಾರ ಸುರತ್ಕಲ್ ಬಿಎಸ್ಎನ್ ಎಲ್ ಕೇಂದ್ರದ ಸಿಬ್ಬಂದಿ ಇಂಟರ್ ನೆಟ್ ಅಳವಡಿಕೆ ಕಾರ್ಯದಲ್ಲಿ ನಿರತರಾಗಿದ್ದರು. ಎನ್ಐಟಿಕೆಯಲ್ಲಿ ಸತತ ಎರಡನೇ ಸಲಕ್ಕೆ ದಕ ಜಿಲ್ಲಾಡಳಿತ ಮತ ಎಣಿಕೆ ಕೇಂದ್ರ ತೆರೆಯುತ್ತಿದೆ. ಪಕ್ಕದ ಲೈಬ್ರೆರಿಗೆ ಹೋಗಲು ವಿದ್ಯಾರ್ಥಿಗಳಿಗೆ ಪರ್ಯಾಯ ದಾರಿ ನಿರ್ಮಿಸಿ ಕೊಡಲಾಗಿದೆ.

ಮತ ಎಣಿಕೆ ಕಾರ್ಯ ಪ್ರಗತಿ ಬಿತ್ತರಿಸಲು ಮೈಕ್, ಮತ ಎಣಿಕೆ ಸಿಬ್ಬಂದಿಗೆ ತುರ್ತು ಆರೋಗ್ಯ ಕೇಂದ್ರ, ಪರಿಸರದ ರಸ್ತೆಗಳಿಗೆ ದೀಪ ವ್ಯವಸ್ಥೆ ಬರಲಿದೆ. ಇದೇ ಕಟ್ಟಡದ ಬಳಿ ಹೊರ ಭಾಗದಿಂದ ಎನ್ಐಟಿಕೆ ಹೊರಗಿನ ಮಂಗಳೂರು ಉಡುಪಿ ರಾಷ್ಟ್ರೀಯ ಹೆದ್ದಾರಿ ಪೂರ್ವಬದಿಯ ಸರ್ವೀಸ್ ರಸ್ತೆ ಇದ್ದು ಎಣಿಕೆ ಕಾರ್ಯ ಆರಂಭವಾಗುವ ಸಂದರ್ಭ ಈ ರಸ್ತೆಯಲ್ಲಿ ಅಭಿಮಾನಿಗಳು ಸೇರದಂತೆ ತಡೆಯಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

vijaya karnataka, Date: 10/05/23 p, no-01